ಓಡಿಸಲಾಯಿತು. ಒಂದೆರಡು ದಿನಗಳಲ್ಲ, ವಾರಗಟ್ಟಳೆ ಹೀಗೇ ನಡೆಯಿತು. ಕಡೆಗಂತೂ ತಾತ್ಕಾಲಿಕ ವಿದ್ಯುತ್ ಸಂಪರ್ಕ ಮರಳಿ ದೊರೆಯಿತು. ಆದರೆ ಇನ್ನೊಂದು ತಿಂಗಳಿಗೆ ಮತ್ತದೇ ರೋಗ. ಬಿಲ್ಡರ್‌ನೊಂದಿಗೆ ಬಹಳಷ್ಟು ಭೇಟಿ, ಮಾತುಕತೆ, ಚರ್ಚೆ, ರೇಗಾಟ, ಜಗಳ, ಜಟಾಪಟಿ, ಘೇರಾವ್, ಬೆದರಿಕೆ ಎಲ್ಲವೂ ನಡೆದು, ಸಮಸ್ಯೆ ಬಗೆಹರಿಯುವ ಬದಲು ಕಗ್ಗಂಟಾಯಿತು. ಈತನಲ್ಲಿ ಹಣವಿಲ್ಲ, ಕಾಯಂ ಸಂಪರ್ಕ ಬರುವುದಿಲ್ಲ, ತಾತ್ಕಾಲಿಕ ಸಂಪರ್ಕದ ಅವಧಿ ಒಂದೇ ತಿಂಗಳು, ಮತ್ತೆ ಮತ್ತೆ ತಾತ್ಕಾಲಿಕ ಸಂಪರ್ಕ ನವೀಕರಿಸು, ಮತ್ತೆ ಮತ್ತೆ ಪವರ್ ಕಟ್, ಮತ್ತೆ ಮತ್ತೆ ಜನರೇಟರ್ ಮೇಲೆ ನಮ್ಮ ಬದುಕು... ಲಗ್ನವಾಗದ ಹೊರತು ಹುಚ್ಚು ಬಿಡ, ಹುಚ್ಚು ಬಿಡದ ಹೊರತೂ ಲಗ್ನವಾಗದಂಥ ಸ್ಥಿತಿ ನಮ್ಮದು. ಪ್ರತಿ ಬಾರಿಯೂ ಅಪಾರ್ಟ್‌ಮೆಂಟ್ ನಿರ್ವಹಣೆಯ ಹಣವನ್ನು ಜನರೇಟರ್‌ನ ಡೀಸೆಲ್‌ಗೆ ಬಳಸಲಾರಂಭಿಸಿದ್ದರಿಂದ ಎಲ್ಲರಿಗಿಂತ ದೊಡ್ಡ ಹೊಡೆತ ಬಂದಿದ್ದು, ನಮ್ಮ ಅಚ್ಚೆಯಂತಹ ನಿರ್ವಹಣಾ ಸಿಬ್ಬಂದಿಗೆ. ಇದೇ ಹಣದಲ್ಲೇ ಅವರಿಗೆಲ್ಲ ಸಂಬಳ ನೀಡಬೇಕಿತ್ತಲ್ಲ. ಮೊದಲೊಂದೆರಡು ತಿಂಗಳು ನಾವೇ ಒಂದಿಷ್ಟು ಜನ ಕೈಯಿಂದ ಹಾಕಿ ಅವರಿಗೆ ಸಂಬಳ ಕೊಟ್ಟಿದ್ದಾಯ್ತು. ಆದರೆ ಈ ಸಮಸ್ಯೆ ತಳ ಕಾಣದ ಬಾವಿಯಂತೆ ಬೆಳೆಯತೊಡಗಿದಾಗ, ನಾವೂ ಕೈಚೆಲ್ಲಬೇಕಾಯ್ತು. ಅವನ ಹೆಂಡತಿ ಊರಿಗೆ ಮರಳಿ ಹೋಗಿ ವರ್ಷದ ಮೇಲಾಗಿತ್ತು. ತನ್ನ ಮೂರನೆಯ ಕೂಸು ಹುಟ್ಟಿದಾಗ ನೋಡಿದ್ದನ್ನು ಬಿಟ್ಟರೆ, ಮತ್ತೆ ಆತ ಮರಳಿ ಹೋಗಿರಲಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಊರಿಗೆ ಕಳಿಸುವುದಕ್ಕೂ ದುಡ್ಡಿಲ್ಲದೆ ಒದ್ದಾಡುವಂತಾಗಿದ್ದ ಅಚ್ಚೆ.

ಈ ಸಮಸ್ಯೆಯ ಪರಿಹಾರಕ್ಕಾಗಿ ನಮ್ಮಲ್ಲಿ ಒಂದಿಷ್ಟು ಜನ ಎಡೆಬಿಡದೆ ಶ್ರಮಿಸುತ್ತಿದ್ದರು. ನಮ್ಮಂತೆಯೇ ಬಿಲ್ಡರ್‌ಗಳ ಕಪಿಮುಷ್ಟಿಯಲ್ಲಿ ಸಿಲುಕಿ ಸೆಣಸುತ್ತಿರುವ ಇನ್ನೂ ಬಹಳಷ್ಟು ಜನರಿದ್ದಾರೆ ಎಂಬುದು ತಿಳಿಯಿತು. ನಾಯಿಕೊಡೆಗಳಂತೆ ಕಂಡಕಂಡಲ್ಲಿ ಅಪಾರ್ಟ್‌ಮೆಂಟ್‌ಗಳು ಏಳುತ್ತಾ ಹೋದರೆ ಅಲ್ಲಿ ಬದುಕುವವರ ಸ್ಥಿತಿ ನಾಯಿಪಾಡೆ! ನಮ್ಮಂತೆಯೇ ನೊಂದ ಕೆಲವು ಅಪಾರ್ಟ್‌ಮೆಂಟಿಗರನ್ನು ಸಂಪರ್ಕಿಸಿ, ಮುಂದೇನು ಮಾಡಬಹುದು ಎಂದು ನಾವೊಂದಿಷ್ಟು ಜನ ಹುಡುಕುತ್ತಿದ್ದೆವು. ನಮ್ಮಲ್ಲಿ ಕೆಲವು ನಿವಾಸಿಗಳ ಪಾಲಿಗೆ ಅಲ್ಲಿನ ಮನೆಯೆಂಬುದು, ಬಹುದಿನಗಳ ಕನಸು; ಅಂಥವರು ಎಲ್ಲಾ ಸಮಸ್ಯೆಗಳಿಗೆ ಸ್ವಲ್ಪ ಬೇಗ ಸ್ಪಂದಿಸುತ್ತಿದ್ದರು. ಇನ್ನು ಕೆಲವರಿಗೆ ಅವರ ಹಲವಾರು ಇನ್ವೆಸ್ಟ್‌ಮೆಂಟ್‌ಗಳ ಪೈಕಿ ಇದೂ ಒಂದು; ಅಂಥವರಿಗೆ ಈ ಸಮಸ್ಯೆಗಳು ಅಷ್ಟೇನೂ ಮಹತ್ವದ್ದಾಗಿರಲಿಲ್ಲ. 'ಹೇಗೋ ನಡೀತಿದೆಯಲ್ಲ, ಬಿಡು' ಎಂದು ಬಿಮ್ಮಗಿದ್ದರು. ಅಂತೂ ಒದ್ದಾಟ ಕೊನೆಗಾಣದಂತಾಗಿತ್ತು.

ಈ ನಡುವೆ ಅಚ್ಚೆ ಕುಡಿಯಲು ಶುರು ಮಾಡಿದ್ದ. ದುಡಿದರೂ ದುಡ್ಡು ಕೈಗೆ ಬರುತ್ತಿಲ್ಲ ಎಂದು ಹಲುಬುತ್ತಿದ್ದ. ಊರಿಗೆ ಹೋಗಿ ಸಂಸಾರದ ಮುಖವಾದರೂ ನೋಡಿ ಬಾ ಎಂದರೆ ಊರಿಗೆ ಹೋಗುವುದಕ್ಕೂ ದುಡ್ಡಿಲ್ಲ ಎಂದು ದೈನೇಸಿ ಮುಖ ಮಾಡುತ್ತಿದ್ದ. ರೈಲು ಟಿಕೇಟು ನಾವೇ ತೆಗೆಸಿಕೊಡುತ್ತೇವೆ ಎಂದರೆ, ಹೆಂಡತಿ ಮಕ್ಕಳನ್ನು ನೋಡಲು ಬರಿಗೈಯಲ್ಲಿ ಹೋಗಲಾಗದೆಂದೂ, ವಯಸ್ಸಾದ ಅಪ್ಪಅಮ್ಮನಿಗೂ ಏನಾದರೂ ಒಯ್ಯಬೇಕೆಂದೂ, ಒಮ್ಮೆ ಹೋಗಿ ಬರಲು ನಾಕೈದು ಸಾವಿರ ರೂಪಾಯಿಗಳು ಬೇಕೆಂದೂ ಅಲವತ್ತುಕೊಂಡ. ನಮ್ಮ ವಸತಿ ಸಮುಚ್ಚಯದ ಸಮಸ್ಯೆ ಹನುಮಂತನ ಬಾಲದಂತಾಗುತ್ತಿತ್ತು. ಅದರೊಂದಿಗೆ ಅಚ್ಚೆಯ ಮುಖದ ಚಿಂತೆಯ ಗೆರೆಗಳೂ ಬೆಳೆಯುತ್ತಿದ್ದವು, ಏರಿಸುವ ಬಾಟ್ಲಿಗಳ ಸಂಖ್ಯೆಯೂ ಏರುತ್ತಿತ್ತು.

★★★

ಇದೇ ಹೊತ್ತಿನಲ್ಲಿ ಊರಿನ ಅಜ್ಜನ ಮನೆಯಿಂದ ಫೋನು ಬಂದಿತ್ತು, ನಮ್ಮಜ್ಜ ತೀರಿಕೊಂಡರೆಂದು.